**2 ನೇ  ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂರವರ ನ್ಯಾಯಾಲಯ,  ಕಡೂರು**

ಅಸಲು ದಾವಾ ಸಂಖ್ಯೆ 12/2017

D .W.-3.

ದಿನಾಂಕಃ 18-04-2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**ಪಾಟೀ ಸವಾಲು ಃ- ವಾದಿ ಪರವಾಗಿ ಶ್ರೀ  ಎಂ ಒ ಜೆ  ವಕೀಲರಿಂದಃ-**

ನಾನು SSLC ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಈಗ 16 ವರ್ಷಗಳಿಂದ ಕಡೂರಿನಲ್ಲಿಯೇ ವಾಸವಾಗಿರುತ್ತೇನೆಂದರೆ ಸರಿ . ಈ  ದಾವೆಯನ್ನು ಯಾರು ಯಾರ ವಿರುದ್ದ ಮತ್ತು ಯಾವ ಪರಿಹಾರವನ್ನು ಕೋರಿ ಈ ದಾವೆಯನ್ನು ಸಲ್ಲಿಸಿರುತ್ತಾರೆ ಎಂಬ ವಿಚಾರವು ನನಗೆ ಗೊತ್ತು. ಈ ದಾವೆಯನ್ನು ವಾದಿಯು  ಪ್ರತಿವಾದಿಯ ಮೇಲೆ ಹಾಕಿರುತ್ತಾರೆ.ದಾವಾ ಆಸ್ತಿಗೆ ಸಂಬಂಧಿಸಿದ ದಾಖಲಾತಿಗಳನ್ನು ನಾನು ನೋಡಿರುತ್ತೇನೆ. ದಾವಾ ಆಸ್ತಿಯ ಅಸೆಸ್ಮೆಂಟ್  ನಂ. 420/ಎ ಇರುತ್ತದೆ. ಪ್ರತಿವಾದಿಯ ಆಸ್ತಿಯ ನಂ. 420/ಎ ಇರುತ್ತದೆ. ದಿಃ 20-05-1980 ರಂದು ವಾದಿಗೆ ಆನಂದಪ್ಪ ಬಿನ್ ಗವಿರಂಗಪ್ಪ ಎಂಬುವವರಿಂದ ಕ್ರಯಕ್ಕೆ ಪಡೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ಸಾಕ್ಷಿಗೆ ನಿಪಿ-1 ನ್ನು ತೋರಿಸಿ ಸದರಿ ನಿಪಿ-1 ರಲ್ಲಿ ತಿಮ್ಮಪ್ಪ ರವರ  ಹೆಸರು ನಮೂದಾಗಿದೆ ಎಂದರೆ ಸರಿ. ಸದರಿ ನಿಪಿ-1 ರ ಆಸ್ತಿಯಲ್ಲಿ ವಾದಿಯು ಸ್ವಾಧೀನಾನುಭವದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿ ಆಸ್ತಿಯ ವಿಸ್ತೀರ್ಣ ಪೂರ್ವ ಪಶ್ಚಿಮ 37 ಅಡಿ, ಉತ್ತರ ದಕ್ಷಿಣ 20 ಅಡಿ ಇರುತ್ತದೆ. ಪ್ರತಿವಾದಿಗೆ ಆಸ್ತಿಯು ಹೇಗೆ ಬಂದಿರುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿಯು ಹೇಳವುದೇನೆಂದರೆ ಅದು  ಗ್ರಾಮ ಠಾಣೆಯ ಆಸ್ತಿಯಾಗಿರುತ್ತದೆ ಎಂದು ಹೇಳುತ್ತಾರೆ. ಪ್ರತಿವಾದಿಗೆ ಆಸ್ತಿಯನ್ನು ಗ್ರಾಮ ಪಂಚಾಯಿತಿಯವರು ಮಂಜೂರು ಮಾಡಿರುತ್ತಾರೆ. ಈ ಕುರಿತು ಪ್ರತಿವಾದಿಯು ದಾಖಲಾತಿಯನ್ನು ಹಾಜರುಪಡಿಸಿರುವ ಬಗ್ಗೆ ನಾನು ನಮ್ಮ ವಕೀಲರಿಂದ ನಾನು ಕೇಳಿ ತಿಳಿದುಕೊಂಡಿರುತ್ತೇನೆ. ಪ್ರತಿವಾದಿಯು ನ್ಯಾಯಾಲಯಕ್ಕೆ ತನ್ನ ಆಸ್ತಿಗೆ ಸಂಬಂಧಿಸಿದಂತೆ ಮಂಜೂರಾತಿ ಪತ್ರವನ್ನು ಹಾಜರುಪಡಿಸಿರುತ್ತಾರೆ.

ಪ್ರತಿವಾದಿಯು ವಾದಿಗೆ ಸಂಬಂಧಿಸಿದ ದಾವಾ ಬಿ ಅನುಸೂಚಿ ಆಸ್ತಿಯನ್ನು ಒತ್ತುವರಿ ಮಾಡಿ ಶೆಡ್ಡನ್ನು ನಿರ್ಮಾಣ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸಹ ಪ್ರತಿವಾದಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯು ದಾವಾ ಬಿ ಅನುಸೂಚಿ ಆಸ್ತಿಯಲ್ಲಿ 25 ವರ್ಷಗಳಿಂದ ಸ್ವಾಧೀನಾನುಭವದಲ್ಲಿ ಇರುತ್ತಾರೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿಯೊಂದಿಗೆ ವಿಶ್ವಾಸದಿಂದ ಇರುವ ಕಾರಣ ಪ್ರತಿವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇ.ಎ.ಒ.,

**(ಈರಪ್ಪ ಢವಳೇಶ್ವರ್)**
**2 ನೇ ಹೆ.ಪ್ರಃದಃನ್ಯಾಃದಂ.ರವರು, ಕಡೂರು.**